C.C– 657/2018

ಪಿ. ಡಬ್ಲೂ – 1

ಸಾಕ್ಷಿಯನ್ನು ದಿಃ 16.07.2026 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿತನ ಪರ ವಕೀಲರಾದ ಶ್ರೀ.ಕೆ.ಎಂ ರವರಿಂದಃ**

2017 ರಲ್ಲಿ ನನ್ನ ತಂದೆಗೆ ಸುಮಾರು 69–70 ವರ್ಷ ವಯಸ್ಸಾಗಿತ್ತು. 2017 ರಲ್ಲಿ ನನ್ನ ತಂದೆ ಸೈಕಲ್ ಶಾಪ್ ಅನ್ನು ನಡೆಸುತ್ತಿದ್ದರು. ನಾನು ಬೆಂಗಳೂರಿನ ಕಂಟ್ರಿ ಕ್ಲಬ್ ನಲ್ಲಿ ಸದಸ್ಯತ್ವವನ್ನು ಪಡೆದಿಲ್ಲ. ಡಾಃ ಉಲ್ಲಾಸರವರು ಕಂಟ್ರಿ ಕ್ಲಬ್ ನ ಸದಸ್ಯರು. ಸದರಿ ಉಲ್ಲಾಸರವರು ಸುರೇಶ್ ನಿಗೆ ಸ್ನೇಹಿತನಾಗಬೇಕು. ಸುರೇಶ್ ರವರು ನನಗೆ ಆರೋಪಿತನನ್ನು ಪರಿಚಯ ಮಾಡಿಸಿದರು. 25 ಲಕ್ಷ ರೂ.ಗಳನ್ನು ಆರೋಪಿತನು ತನ್ನ ವ್ಯವಹಾರಕ್ಕೆ ಬೇಕು ಎಂದು ಕೇಳಿದನು. ಯಾವ ವ್ಯವಹಾರಕ್ಕಾಗಿ ಅವನು ಹಣ ಕೇಳುತ್ತಿದ್ದಾನೆ ಎಂದು ನಾನು ಪರಿಶೀಲನೆ ಮಾಡಲು ಪ್ರಯತ್ನ ಮಾಡಿಲ್ಲ. 2017 ಫೆಬ್ರವರಿಯಿಂದ ಆಗಸ್ಟ್2017 ರವರೆಗೆ ನನ್ನ ಮತ್ತು ಆರೋಪಿತನ ನಡುವೆ ಫೋನ್ ಸಂಪರ್ಕ ಇತ್ತು.

ಬೆಂಗಳೂರಿನ ಹೊರಮಾವು ನಲ್ಲಿ ನನ್ನ ಅಣ್ಣನ ಮನೆ ಇದೆ. ದಿನಾಂಕ 01.10.2017 ರಂದು ನಾನು ಸಾಗರದಲ್ಲಿ, ದಿನಾಂಕ 02.10.2017 ಮತ್ತು ದಿನಾಂಕ 03.10.2017 ರಂದು ಬೆಂಗಳೂರಿನ ನನ್ನ ಅಣ್ಣನ ಮನೆಯಲ್ಲಿ ಇದ್ದೆ. 2017 ಫೆಬ್ರವರಿಯಲ್ಲಿ ಆರೋಪಿ ತನಗೆ 25 ಲಕ್ಷ ರೂ. ಬೇಕು ಎಂದು ಕೇಳಿದ್ದನು. ಫೆಬ್ರವರಿ ಮಾರ್ಚ್ ನಲ್ಲಿ ಆರೋಪಿತನು ನನ್ನನ್ನು ನೇರವಾಗಿ ಭೇಟಿ ಮಾಡಿ ಕಂಟ್ರಿ ಕ್ಲಬ್ ನ ಹತ್ತಿರ ಹಣವನ್ನು ಕೇಳಿದನು. ಆ ಸ್ಥಳಕ್ಕೆ ನಾನು ಒಂದು ಆಸ್ತಿಯನ್ನು ನೋಡಲು ಹೋಗಿದ್ದೆ. ಆ ಸಂದರ್ಭದಲ್ಲಿ ಆರೋಪಿತನು ನನ್ನನ್ನು ಹಣ ಕೇಳಿದನು. ಸಂಜೆ ಸಮಯದಲ್ಲಿ ಆರೋಪಿತನು ನನ್ನನ್ನು

ಭೇಟಿ ಮಾಡಿ, ಹಣ ಕೇಳಿದ್ದು, ಆ ದಿನ ಯಾವ ದಿನಾಂಕವಾಗಿತ್ತು ಎಂದು ನನಗೆ ನಿಖರವಾಗಿ ನೆನಪಿಲ್ಲ. ಹಣ ಕೇಳಿದಾಗ ನನ್ನ ಜೊತೆ ಸುರೇಶ್ ಎನ್ನುವವರು ಇದ್ದರು.

ಫೆಬ್ರವರಿ 2017 ರ ಮೊದಲು ಆರೋಪಿತನನ್ನು ನಾನು ಬೆಂಗಳೂರಿನ ಯಲಹಂಕದಲ್ಲಿ 2016 ರಲ್ಲಿ ನೋಡಿದ್ದೆ. ಆದರೆ ದಿನಾಂಕ ನೆನಪಿಲ್ಲ. ಯಲಹಂಕದಿಂದ ಹೊರಮಾವು ಇಲ್ಲಿಗೆ ಸುಮಾರು 18-20 ಕಿ.ಮೀ ಅಂತರ ಇರಬಹುದು. ಆರೋಪಿತನು ಫೆಬ್ರವರಿ 2017 ರಲ್ಲಿ ನನಗೆ ಸಿಕ್ಕಾಗ ಹಣ ಬೇಕು ಎಂದು ಕೇಳಿದ್ದನು. ಆದರೆ ಎಷ್ಟು ಹಣ ಎಂದು ಕೇಳಿರಲಿಲ್ಲ. ಆಗಸ್ಟ್ 2017 ರಲ್ಲಿ ಆರೋಪಿತನು ನನ್ನ ಬಳಿ 25 ಲಕ್ಷ ಹಣ ಬೇಕು ಎಂದು ಕೇಳಿದನು. ನನ್ನ ದೂರು, ಮುಖ್ಯ ವಿಚಾರಣೆ ಹಾಗೂ ನೋಟೀಸಿನಲ್ಲಿ ಎಲ್ಲಾ ವಿಷಯಗಳನ್ನು ವಿವರವಾಗಿ ಹೇಳಲು ಯಾವುದೇ ತೊಂದರೆ ಇರಲಿಲ್ಲ. ಆಗಸ್ಟ್ 2017 ರಲ್ಲಿ ಆರೋಪಿತನು ನನಗೆ ಹಣ ಕೇಳಿದಾಗ ಅಕ್ಟೋಬರ್ ನಲ್ಲಿ ನೋಡುತ್ತೇನೆ ಎಂದು ಹೇಳಿದ್ದೆ. ಸೆಪ್ಟೆಂಬರ್ 2017 ರಲ್ಲಿ ನಾನು 25 ಲಕ್ಷ ರೂ.ಗಳನ್ನು ಹೊಂದಿಸಿಕೊಂಡೆ. ದಿನಾಂಕ 01.10.2017 ರಂದು ನಾನು ಹಣವನ್ನು ಹೊಂದಿಸಿದ್ದೇನೆ ಎಂದು ಆರೋಪಿತನಿಗೆ ಫೋನ್ ಮೂಲಕ ತಿಳಿಸಿದ್ದೇನೆ. ಆರೋಪಿತನಿಗೆ ಫೋನ್ ಮಾಡಿದ ಸಮಯ ನನಗೆ ನೆನಪಿಲ್ಲ. ಆದರೆ ಮಧ್ಯಾಹ್ನದ ನಂತರ ತಿಳಿಸಿರಬಹುದು. ದಿನಾಂಕ 01.10.2017 ರಂದು 25 ಲಕ್ಷ ರೂ.ಗಳು ನನ್ನ ಬಳಿ ಇತ್ತು.

ದಿನಾಂಕ 02.10.2017 ರಂದು ಸಾಗರದಿಂದ 25 ಲಕ್ಷ ರೂ.ಗಳನ್ನು ಬೆಂಗಳೂರಿಗೆ ಕಾರಿನಲ್ಲಿ ತೆಗೆದುಕೊಂಡು ಹೋದೆ. ಹಣ ತೆಗೆದುಕೊಂಡು ಹೋಗುವಾಗ ನನ್ನೊಂದಿಗೆ ಯಾರು ಇರಲಿಲ್ಲ. ಆ ದಿನ ನಾನು 500 ರೂ. ಮುಖಬೆಲೆಯ 50 ಬಂಡಲ್ ಗಳನ್ನು (500x100) ಬೆಂಗಳೂರಿಗೆ ತೆಗೆದುಕೊಂಡು ಹೋದೆ. ಬೆಳಿಗ್ಗೆ ಸುಮಾರು 06.00 ಗಂಟೆಗೆ ಸಾಗರದಿಂದ ಹೊರಟು ಮಧ್ಯಾಹ್ನ ಸುಮಾರು 12.00 ಗಂಟೆಗೆ ನಾನು ಬೆಂಗಳೂರನ್ನು ತಲುಪಿದ್ದೆ. ಆ ಹಣವನ್ನು ನಾನು ಬೆಂಗಳೂರಿನ ನನ್ನ ಅಣ್ಣನ ಮನೆಯಲ್ಲಿ ಇಟ್ಟುಕೊಂಡು ಆ ದಿನ ವಾಸ್ತವ್ಯ ಹೂಡಿದ್ದೆ. ಆ ದಿನ ಆರೋಪಿತನನ್ನು ಹಣ ತಂದಿದ್ದೇನೆ, ಹೊರಮಾವು ನ ನನ್ನ ಅಣ್ಣನ ಮನೆಗೆ ಬಾ ಎಂದು ಕರೆದಿಲ್ಲ. 25 ಲಕ್ಷ ರೂ.ಗಳ ಹಣವನ್ನು ಕಂಟ್ರಿ ಕ್ಲಬ್ ನ ಎದುರು ಬಾಗಲೂರು ಮುಖ್ಯ ರಸ್ತೆಯಲ್ಲಿ ನನ್ನ ಕಾರಿನಲ್ಲಿ ಕುಳಿತುಕೊಂಡು ಆರೋಪಿತನಿಗೆ ನಾನು ನೀಡಿದ್ದೇನೆ. ಆಗ ಸಂಜೆ 05.00-06.00 ಗಂಟೆ ಆಗಿತ್ತು. ಹಣವನ್ನು ನಾನು ಸ್ವತಃ ಎಣಿಕೆ ಮಾಡಿಯೇ ಕೊಟ್ಟಿದ್ದೇನೆ. ಹಣ ಕೊಟ್ಟಾಗ ಆರೋಪಿತನನ್ನು ಮತ್ತು ನನ್ನನ್ನು ಹೊರತು ಪಡಿಸಿ ಬೇರೆ ಯಾರು ಇರಲಿಲ್ಲ. ಕಂಟ್ರಿ ಕ್ಲಬ್ ನ ಎದುರಿಗೆ ನಾನೇ ಹಣವನ್ನು ತೆಗೆದುಕೊಂಡು ಬರುತ್ತೇನೆ ಎಂದು ಆರೋಪಿತನಿಗೆ ನಾನು ಹೇಳಿದ್ದೆ.

ಹಣವನ್ನು ಕೊಟ್ಟಾಗ ಆರೋಪಿತನ ಆಧಾರ್ ಕಾರ್ಡ್ ಮತ್ತು ಪಾನ್ ಕಾರ್ಡನ್ನು ನಾನು ಪರಿಶೀಲನೆ ಮಾಡಲಿಲ್ಲ. ಸಾಮಾನ್ಯವಾಗಿ ಹಣ ಕೊಡುವಾಗ ಹಣ ಪಡೆಯುವವನ ಗುರುತಿನ ಬಗ್ಗೆ ದಾಖಲೆಗಳನ್ನು ಪಡೆದುಕೊಂಡ ನಂತರವೇ ಹಣ ಕೊಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಯಾರಿಗಾದರೂ ಹಣಕಾಸಿನ ಅವಶ್ಯಕತೆ ಇದ್ದರೆ ಅಂತಹವರನ್ನು ಹಣ ಕೊಡುವವರು ತಮ್ಮ ಬಳಿ ಕರೆಯಿಸಿಕೊಂಡು ಹಣ ಕೊಡುತ್ತಾರೆ ಎಂದರೆ ಸರಿ. ದೊಡ್ಡ ಮೊತ್ತದ ಹಣ ಕೊಡುವಾಗ ಹಣ ಪಡೆಯುವವರನ್ನು ಬೇರೆ ಯಾರನ್ನಾದರೂ ಜೊತೆಯಲ್ಲಿ ಕರೆದುಕೊಂಡು ಅಥವಾ ಭದ್ರತೆಗಾಗಿ ಜಾಮೀನನ್ನು ಕೊಡು ಎಂದು ಕೇಳುತ್ತಾರೆ ಎಂದರೆ, ಸಾಕ್ಷಿಯು ನಾನು ಆ ರೀತಿ ಯೋಚನೆಯೇ ಮಾಡಿಲ್ಲ ಎನ್ನುತ್ತಾರೆ. ದೊಡ್ಡ ಮೊತ್ತದ ಹಣವನ್ನು ಸಾಲವಾಗಿ ಕೊಡುವಾಗ ಆ ಹಣವನ್ನು ಸಾಲ ಪಡೆದ ವ್ಯಕ್ತಿ ಮರುಪಾವತಿ ಮಾಡುವ ಸಾಮರ್ಥ್ಯವನ್ನು ಹೊಂದಿದ್ದಾನೆಯೇ ಎಂದು ಪರಿಶೀಲನೆ ಮಾಡಿ ಹಣವನ್ನು ಕೊಡುತ್ತಾರೆ ಎಂದರೆ ಸರಿ. ನಾನು ಸಹ ಆರೋಪಿತನು ಹಣವನ್ನು ಮರುಪಾವತಿ ಮಾಡಬಲ್ಲನೇ ಎಂದು ಪರಿಶೀಲನೆ ಮಾಡಿದ್ದೇನೆ. ಆರೋಪಿತನು ಹಣವನ್ನು ಮರುಪಾವತಿ ಮಾಡಬಲ್ಲೆ ಎಂದು ಹೇಳಿದ್ದನು. ಆದರೆ ನಾನು ಈ ಕುರಿತು ಯಾವುದೇ ಪರಿಶೀಲನೆ ಮಾಡಿರುವುದಿಲ್ಲ.

ಹಣ ಕೊಡುವಾಗ ನನ್ನ ಸ್ನೇಹಿತ ಸುರೇಶನನ್ನು ನನ್ನೊಂದಿಗೆ ಕರೆದುಕೊಂಡು ಹೋಗಲು ಯಾವುದೇ ತೊಂದರೆ ಇರಲಿಲ್ಲ. ಕೃಷಿ ಉತ್ಪನ್ನದಿಂದ ನನಗೆ ಆದಾಯ ಬಂದಿತ್ತು ಎಂದು ನಾನು ಹೇಳಿದ್ದು, ಅದು ಯಾವ ಆದಾಯ ಎಂದರೆ, ಶುಂಠಿ ಉತ್ಪನ್ನ ಎನ್ನುತ್ತಾರೆ. ಸದರಿ ಶುಂಠಿಯನ್ನು ಫಯಾಜ್ ಎನ್ನುವವರಿಗೆ ಮಾರಾಟ ಮಾಡಿದ್ದೇನೆ. ನಾನು ಶುಂಠಿಯನ್ನು ಬೆಳೆದ ಬಗ್ಗೆ ಹಾಗೂ ಅದನ್ನು ಮಾರಾಟ ಮಾಡಿದ ಬಗ್ಗೆ ಲಿಖಿತ ದಾಖಲೆಗಳು ನನ್ನ ಬಳಿ ಇಲ್ಲ. 2017 ರಲ್ಲಿ ನನ್ನ ಬಳಿ 17 ಲಕ್ಷ ಇತ್ತು ಎನ್ನುವ ಬಗ್ಗೆ ದಾಖಲೆಗಳು ಇಲ್ಲ ಎಂದರೆ, ಸಾಕ್ಷಿಯು ವ್ಯವಸಾಯದ ಆದಾಯಕ್ಕೆ ದಾಖಲೆಗಳು ಇಲ್ಲ ಎನ್ನುತ್ತಾರೆ. ನನಗೆ ಕೃಷಿ ಜಮೀನುಗಳು ಇದ್ದವು ಎನ್ನುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. 2017 ರಲ್ಲಿ ನನಗೆ ಕೃಷಿ ಭೂಮಿಯೇ ಇರಲಿಲ್ಲ ಎಂದರೆ ಸರಿಯಲ್ಲ.

ಸಾಗರದ ಮಾರಿಗುಡಿ ಹತ್ತಿರ ಇರುವ ಕಾರ್ಪೊರೇಶನ್ ಬ್ಯಾಂಕ್ ಶಾಖೆಯಿಂದ ನನ್ನ ತಂದೆಯ ಖಾತೆಯಿಂದ 8 ಲಕ್ಷ ರೂ.ಗಳನ್ನು ನನ್ನ ತಂದೆ 2017 ಸೆಪ್ಟೆಂಬರ್ ನಲ್ಲಿ ವಿತ್ ಡ್ರಾ ಮಾಡಿಕೊಂಡು ಬಂದು ನನಗೆ ಕೊಟ್ಟರು. ಹಣವನ್ನು ತರುವಂತೆ ನನ್ನ ತಂದೆಗೆ ನಾನೇ ಹೇಳಿದ್ದೆ. ಹಣವನ್ನು ಬಿಡಿಸಿಕೊಂಡು ಬರುವ ಪೂರ್ವದಲ್ಲಿ ಆ ಹಣ ಯಾವ ಉದ್ದೇಶಕ್ಕೆ ಬೇಕು ಎಂದು ಅವರು ನನ್ನನ್ನು ಕೇಳಿಲ್ಲ. ಏಕೆಂದರೆ ಆ ಹಣವು ನನ್ನದೇ ಆಗಿತ್ತು. ಆರೋಪಿತನಿಗೆ ಹಣ ಕೊಟ್ಟ ವಿಷಯವನ್ನು ನನ್ನ ತಂದೆ ತಾಯಿಗೆ ತಿಳಿಸಿಲ್ಲ. ಸೆಪ್ಟೆಂಬರ್ 2019 ರಲ್ಲಿ ನನ್ನ ತಂದೆ ಖಾತೆಯಿಂದ 8 ಲಕ್ಷ ಹಿಂಪಡೆದಿರುವ ಬಗ್ಗೆ

ಪಾಸ್ ಪುಸ್ತಕವನ್ನು ಹಾಜರು ಪಡಿಸಲು ನನಗೆ ತೊಂದರೆ ಇಲ್ಲ. 2017–18 ನೇ ಸಾಲಿನ ನನ್ನ ಆದಾಯ ತೆರಿಗೆ ದಾಖಲೆಗಳನ್ನು ನಾನು ನ್ಯಾಯಾಲಯದ ಮುಂದೆ ಹಾಜರು ಪಡಿಸಬಲ್ಲೆ. ಆರೋಪಿತನು ಹಣ ಪಡೆದ ದಿನವೇ ನನಗೆ ಚೆಕ್ ಅನ್ನು ನೀಡಿದನು.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.